# ಮಾನವ ಮೂಳೆ ಮಾಂಸದ ತಡಿಕೆ!

ಭಾರತೀಯರಿಗೆ ಪುನರ್ಜನ್ಮದ ಬಗ್ಗೆ ಅಪಾರವಾದ ನಂಬಿಕೆ ಇದೆ. ಈ ನಂಬಿಕೆಯೆ ಅವರಲ್ಲಿ ಆತ್ಮ 'ಶಾಶ್ವತ'ವೆಂದೂ, ದೇಹ 'ನಶ್ವರ'ವೆಂದೂ ಶ್ರದ್ಧೆ ಮೂಡಿಸಲು ಕಾರಣವಾಗಿದೆ. ಹಾಗೆ ನೋಡಿದರೆ, ಈ ಪುನರ್ಜನ್ಮದ ಪರಿಕಲ್ಪನೆ ಕೇವಲ ಭಾರತೀಯ ಸಿದ್ಧಾಂತಗಳಿಗೆ ಅಂಟಿದ ನಂಬಿಕೆಯಲ್ಲ. ಜಗತ್ತಿನ ಎಲ್ಲ ಪ್ರಮುಖ ಧರ್ಮಗಳಲ್ಲೂ ಇದೊಂದು ಕಾಡುವ ಪರಿಕಲ್ಪನೆಯಾಗಿ ಬೆಳೆದು ಬಂದಿದೆ. 'ಆತ್ಮದ' ನಂಬಿಕೆಯಿಂದಾಗಿಯೇ 'ಬದುಕಿನಾಚೆಯ ಬದುಕಿನ' ಪ್ರಪಂಚವೊಂದು ಎಲ್ಲ ಮತಧರ್ಮಗಳಲ್ಲೂ ಸೃಷ್ಟಿಯಾಗಿದೆ. ಆ ಬದುಕಿನಾಚೆಯ ಬದುಕನ್ನು ಸ್ವರ್ಗವೆಂದೂ ನರಕವೆಂದೂ ಕರೆದು, ದೇವತೆಗಳನ್ನು ರಾಕ್ಷಸರನ್ನು ಸೃಷ್ಟಿಮಾಡಿ ಕಲ್ಪನಾಸಾಹಿತ್ಯ ರಚನೆ ಮಾಡಲಾಗಿದೆ. ಆದಿವಾಸಿಗಳಿಂದ ಹಿಡಿದು ಆಧುನಿಕ ಮತ ಧರ್ಮಗಳ ಅನುಯಾಯಿಗಳವರೆಗೆ ಈ ಕಲ್ಪನಾಸಾಹಿತ್ಯ ವೈವಿಧ್ಯಮಯವಾಗಿ ಅಭಿವ್ಯಕ್ತಿ ಪಡೆದಿದೆ. ಮತ ಧರ್ಮಗಳ ಸಿದ್ಧಾಂತಗಳಿಗನುಗುಣವಾಗಿ ಪಾಪ ಮಾಡಿದ ಆತ್ಮ ಅಂತರ್ ಪಿಶಾಚಿಯಾಗಿ ತೊಳಲಾಡುವ– ಅನೇಕ ಜನ್ಮಗಳಲ್ಲಿ ಅನೇಕ ಯೋನಿಗಳ ಮೂಲಕ ಹಾದು ಬಂದು ಪುಣ್ಯ ಸಂಪಾದಿಸಬೇಕಾದ ಅನಿವಾರ್ಯತೆಗೆ ಸಿಲುಕುತ್ತದೆ. ಪಾಪದ ಸಂಚಯ ಖಾಲಿಯಾಗಿ ಪುಣ್ಯದ ಬಾಗಿಲು ತೆರೆದಾಗ ಸ್ವರ್ಗ ಪ್ರಾಪ್ತಿಯಾಗುತ್ತದೆ. ಅಲ್ಲಿಯವರೆಗೆ ಆತ್ಮ ನಿರಂತರವಾಗಿ ಅನೇಕ ದೇಹವೆಂಬ ಮಾಂಸದ ತಡಿಕೆಯನ್ನು ತೊಡುತ್ತಲೇ ಇರಬೇಕಾಗುತ್ತದೆ. ಈ ಕಾರಣದಿಂದ ಈ ದೇಹ ಪದೆ ಪದೆ ಧರಿಸಿ, ಕೊಳೆಯಾದರೆ ತೆಗೆದುಹಾಕುವ ಅಥವಾ ಹರಿದು ಹೋದರೆ ಬಿಸುಟು ಹೊಸತಾಗುವ ಬಟ್ಟೆಯ ಪ್ರತೀಕವಾಗಿಬಿಟ್ಟಿತು!

ತತ್ತ್ವ ಮೀಮಾಂಸೆಯಲ್ಲಿ ಯಾವಾಗಲೂ ಶಾಶ್ವತವಾಗಿರುವುದಕ್ಕೆ ಹೆಚ್ಚು ಬೆಲೆ. ಆತ್ಮ ಶಾಶ್ವತವಾದುದು, ಮುಪ್ಪು– ಸಾವಿಲ್ಲದ್ದು, ಅಂತಿಮದಲ್ಲಿ ಅದು ಭಗವನಲ್ಲಿ ಐಕ್ಯವಾಗಿ ನೆಲೆಸುವಂಥದ್ದು/ ಸಾನ್ನಿಧ್ಯದಲ್ಲಿರುವಂಥದ್ದು. ಆದರೆ ದೇಹಕ್ಕೆ ಆ ಭಾಗ್ಯವಿಲ್ಲ! ಅದು ಜನ್ಮ ಜನ್ಮದಲ್ಲಿ ಹುಟ್ಟಿ ನಾಶವಾಗುವಂಥದು! ರೋಗ ರುಜಿನಗಳಿಂದ ನರಳುವಂಥದ್ದು, ವಯಸ್ಸಾಗಿ ಮಣ್ಣಲ್ಲಿ ಮಣ್ಣಾಗುವಂಥದ್ದು. ಆದ್ದರಿಂದ ಅದಕ್ಕೆ ಅಂಥ ಬೆಲೆಯಿಲ್ಲ. ಅದು ನಿಕೃಷ್ಟವಾದುದು. 'ಮೂಳೆ ಮಾಂಸದ ತಡಿಕೆ. ತಡಿಕೆಯ ಮೇಲೆ ತೊಗಲಿನ ಹೊದಿಕೆಯನ್ನು ಹಾಕಿಕೊಂಡಿದೆ'! ಧರಿಸಿ ಬಿಸಾಡುವಂಥ ಈ ದೇಹಕ್ಕೇಕೆ ಬೆಲೆ ಕೊಡಬೇಕೆಂಬುದು ನಮ್ಮ ಧಾರ್ಮಿಕ ತಿಳಿವಳಿಕೆಯ ನಿಲುವು.

ಇದೊಂದು ವಿಚಿತ್ರ ಸತ್ಯ. ಇರುವುದನ್ನು ತುಚ್ಛೀಕರಿಸಿ ಇರದದುರ ಕಡೆ ತುಡಿಯುವ ಕ್ರಿಯೆ. ಗೋಪಾಲಕೃಷ್ಣ ಅಡಿಗರ ಮೋಹನ ಮುರಳಿಯ ಕರೆಯು ಇದನ್ನೇ ಧ್ವನಿಸುವುದು. ಅವರ ಕಾವ್ಯದ ಆಶಯವನ್ನು ಭಾರತೀಯ ತತ್ತ್ವಸಿದ್ಧಾಂತಗಳ ಹಿನ್ನಲೆಯಲ್ಲಿ ಪರಿಭಾವಿಸಿದಾಗ, ಅವರ ಮತಧರ್ಮಗಳ ಬದ್ಧತೆ ಸ್ಪಷ್ಟವಾಗುತ್ತದೆ. ಬದುಕಿನಲ್ಲಿ ಸಿಗುವುದು, ಸಿಗುತ್ತಿರುವುದು ನಮಗೆ ಅಗಣ್ಯವಾಗುತ್ತದೆ. ಅದರ ಅನುಭವ ನಮಗೆ ಮತ್ತೊಂದು ನಿಗೂಢವನ್ನು ಅರಸುವ ಕ್ರಿಯೆಗೆ ಪ್ರಚೋದಿಸುತ್ತದೆ. ಈ ನಿಗೂಢ ಪ್ರಕೃತಿಯೇ ಆಗಬೇಕಾಗಿರುವುದು ಮತ್ತು ಅದರ ಅನಂತ ಗುಹ್ಯಗಳನ್ನು ಶೋಧಿಸುವುದರತ್ತ ನಮ್ಮನ್ನು ಕರೆದೊಯ್ಯಬೇಕು. ಆದರೆ ದುರಂತವೆಂದರೆ– ಈ ನಿಗೂಢವನ್ನು ಕಾಲ್ಪನಿಕ ಜಗತ್ತಿನ ತಿಳಿವಳಿಕೆಯ ಅರಿವೆಂದು ಭಾವಿಸಿದ್ದು; ಅದು ಆತ್ಮ– ಪರಮಾತ್ಮ, ಸ್ವರ್ಗ– ನರಕ, ದೇವರು– ರಾಕ್ಷಸರ ಕಲ್ಪನೆಗಳಲ್ಲಿ ಬೆರೆತು ಹೋದದ್ದು. ವಾಸ್ತವ ಸತ್ಯವಾದ, ಈ ಜಗತ್ತಿನ ಎಲ್ಲ ಅರಿವನ್ನು ಗ್ರಹಿಸಿ ಅಭಿವ್ಯಕ್ತಿಸುವ ದೇಹವನ್ನು, ಪ್ರಕೃತಿಯ ಸಹಜ ಚೆಲುವನ್ನು ನೋಡಿ ರಸಾನಂದವನ್ನು ಅನುಭವಿಸುವ ದೇಹವನ್ನು, ಬದುಕಿಗೊಂದು ಅಸ್ತಿತ್ವವನ್ನು ಆಸಕ್ತಿಯನ್ನು ಚಿಗುರಿಸುವ ದೇಹವನ್ನು ನಶ್ವರವೆಂದೂ ಹೀನವೆಂದೂ ಪರಿಭಾವಿಸುವುದು ಉಚಿತವಲ್ಲ.

ದೇಹವಿಲ್ಲದೆ ಆತ್ಮವಿಲ್ಲ. ಆತ್ಮಕ್ಕೆ ಅದರದೇ ಆದ ವ್ಯಕ್ತಿತ್ವವೂ ಇಲ್ಲ, ರೂಪವೂ ಇಲ್ಲ. ಅದಕ್ಕೊಂದು ವಿಶೇಷ ಲಭ್ಯವಾಗಿರುವುದೇ ದೇಹದಿಂದ. 'ಆತ್ಮ'ವೆಂದು ಕರೆದಿರುವುದು ಯಾವುದನ್ನು? ಅದು ದೇಹದ ಯಾವ ಅಂಗಾಂಶದ ಅನುಭವ ವಿಶೇಷ? ಅದು ಉಸಿರೇ? ಮನಸ್ಸೇ? ಬುದ್ಧಿಯೇ? ನಮ್ಮ ಬುದ್ಧಿ ಭಾವಗಳು ದೇಹದ ಅವಿಭಾಜ್ಯ ಅಂಗ. ಆ ಮೂಲಕ ಸಕಲ ಸರ್ವಸ್ವವೂ ಅನುಭವಗೊಳ್ಳುತ್ತದೆ. ಉಸಿರು ಜೈವಿಕ ವೈಜ್ಞಾನಿಕ ಸತ್ಯ. ಅದು ಜೀವ–ದೇಹ ಬದುಕಿರುವವರೆಗೂ ಸಂಗಾತಿಯಾಗಿದ್ದು, ಅನಂತರ ಪ್ರಕೃತಿಯ ಸಹಜ ಸತ್ಯವಾದ ಗಾಳಿಯಲ್ಲಿ ಒಂದಾಗುತ್ತದೆ. ಆ ಉಸಿರನ್ನು ಆತ್ಮವೆಂದು ಕರೆದು, ಅದು ಸ್ವರ್ಗ ನರಕ ಪಾತಾಳಗಳಲ್ಲಿ ತನ್ನ ಪಾಪ ಕಳೆದುಕೊಂಡು ಮುಕ್ತವಾಗುವವರೆಗೆ ಸಂಚರಿಸುತ್ತಿರುತ್ತದೆ ಎಂಬ ಕಲ್ಪನೆಯೇ ಅವೈಚಾರಿಕವಾದುದು.

ಸಕಲ ಪ್ರಾಣಿಗಳಂತೆಯೇ ಮನುಷ್ಯ ಜೀವವೂ ಒಂದು. ಅದು ಅತ್ಯಂತ ಸುಂದರವೆಂದು ಭಾವಿಸುವುದೇ ಸಂತೋಷ ತರುತ್ತದೆ.

■ ಶಿಕಾಕು

## ಮಾತೇ ಮುತ್ತು

★ ಎಲ್ಲರೂ ಅವನ ಸುಖ ಹಂಚಿಕೊಳ್ಳಲಾಶಿಸುತ್ತಾರೆ; ಆದರೆ ಯಾರೂ ಅವನ ದುಃಖ ಹಂಚಿಕೊಳ್ಳಲು ಅಪೇಕ್ಷಿಸರು.

–ಥಾಮಸ್ ಕೆಂಪಿಸ್

★ ಜೀವನವೆಲ್ಲಾ ಸುಖಮಯ! ಜೀವಂತ ಇರುವ ಯಾವ ಮನುಷ್ಯನೂ ಅದನ್ನು ಸಹಿಸಲಾರ. ಭೂಮಿಯ ಮೇಲಿನ 'ನರಕ' ಅದೇ.

–ಜಾರ್ಜ್ ಬರ್ನಾರ್ಡ್ ಶಾ

★ ಸತ್ತಮೇಲೆ ಹುಳುಗಳು ತಿಂದು ಹಾಕುತ್ತವೆ; ದುಃಖವಾದರೋ ಬದುಕಿರುವಾಗಲೇ ತಿಂದು ಹಾಕುತ್ತದೆ.

–ಯಹೂದಿ ಗಾದೆ

★ ನಿರ್ದಿಷ್ಟ ಜಾತಿಯ ವಿರೋಧಿ ಸಮಯಸಾಧಕ. ಒಟ್ಟು ಜಾತೀಯತೆಯ ವಿರೋಧಿ ಜನಪರ.

–ಅನುಭವಾಮೃತ

★ ಸುಧಾರಣೆ ಎನ್ನುವುದು ಒಂದು ಮನಸ್ಸಿನ ರೋಗ. ಪ್ಲೇಗು, ಕಾಲರ ಮೊದಲಾದ ರೋಗಗಳಿಂದ ಮನುಷ್ಯನು ಎಷ್ಟು ಎಚ್ಚರವಾಗಿರಬೇಕೋ, ಈ ಸುಧಾರಣೆಯ ಬೇನೆಯಿಂದ ಅವನು ಅಷ್ಟು ದೂರವಾಗಿರಬೇಕು.

–ಶಿವರಾಮ ಕಾರಂತ

★ ಸಾಮಾಜಿಕ ಸಂಸ್ಥೆಗಳನ್ನು ಪೋಷಿಸಲು ಕಾನೂನೊಂದೇ ಸಾಲದು. ಅವುಗಳಲ್ಲಿ ಧಾರ್ಮಿಕ ಅನುಮೋದನೆ ಮತ್ತು ಸಾಮಾಜಿಕ ಅನುಮೋದನೆ ಅತ್ಯಂತ ಮುಖ್ಯವಾದವು.

–ಬಿ.ಆರ್.ಅಂಬೇಡ್ಕರ್

★ 'ಅಲ್ಪ' ಎನ್ನುವ ಸುಳ್ಳಿನಿಂದ 'ಹೆಚ್ಚು' ಎನ್ನುವಂಥದನ್ನು ಸಾಧಿಸುವವನೇ ಸುಳ್ಳುಗಾರ.

–ಸ್ಯಾಮ್ಯುಯಲ್ ಬಟ್ಲರ್

★ ಕಲಾಸೃಷ್ಟಿಗಳಲ್ಲಿ 'ಕಲೆಗಾಗಿ ಕಲೆ'ಎಂಬ ದೃಷ್ಟಿಕೋನವಿಲ್ಲ. ಬದಲು ಬದುಕಿನ ಸಾರ್ಥಕ ಮುಹೂರ್ತಗಳನ್ನು ಕಾಣುವ ಬಗೆ ಇದೆ.

–ಆರ್.ಎಂ.ಹಡಪದ

★ ಸತ್ಯಕ್ಕೆ ಒಂದು ಬಣ್ಣ; ಸುಳ್ಳಿಗೆ ನಾನಾ ಬಣ್ಣ.

–ಲ್ಯಾಟಿನ್ ಗಾದೆ

★ ಹಣದಿಂದ ಬಂದ ಸಹಾಯ ತಾನೇ ತಾನಾಗಿ ಬಂದ ಸೇವೆಯೊಡನೆ ಎಂದೂ ಸಮನಾಗಿ ನಿಲ್ಲಲಾರದು.

–ಸಿ.ಎಫ್.ಅಂಡ್ರ್ಯೂಸ್

★ ಸ್ನೇಹಿತನನ್ನು ಪಡೆಯಲು ಇರುವ ಒಂದೇ ದಾರಿ ನೀನು ಸ್ನೇಹಿತನಾಗಿರುವುದು.

–ಸಿಸಿರೋ

★ ಹಳೆಯ ಸ್ನೇಹಿತನಿಗಿಂತ ಒಳ್ಳೆಯ ಕನ್ನಡಿ ಇಲ್ಲ.

–ರಷ್ಯನ್ ಗಾದೆ

★ ದಡ್ಡ ಸ್ನೇಹಿತ, ವಿವೇಕಿ ಶತ್ರುವಿಗಿಂತ ಅಪಾಯಕಾರಿ.

–ಹಂಗೇರಿ ಗಾದೆ

★ ಈ ಎರಡೇ ಸಂಸಾರಸಾರ ಸರ್ವಸ್ವ; ನಾವೇ ಹರ್ಷ ಪಡುವುದು ಒಂದು, ಪರರ ಹರ್ಷವ ಕಂಡು ಸಂತೋಷ ಪಡುವುದು ಮತ್ತೊಂದು.

–ಎಸ್.ವಿ.ರಂಗಣ್ಣ

★ ಹಳೆಯ ಸ್ನೇಹಿತ ಹೊಸ ಮನೆ ಇದ್ದಂತೆ.

–ಬ್ರಿಟಿಷ್ ಗಾದೆ

★ ಸ್ನೇಹಿತನ ತಪ್ಪುಗಳನ್ನು ಗುಟ್ಟಾಗಿ ತಿದ್ದು, ಎಲ್ಲರೆದುರು ಹೊಗಳು.

–ಜೆಕ್ ಗಾದೆ

★ ಸಾವಿಲ್ಲದ ಮನೆಯಿಲ್ಲ; ಸೋಲಿಲ್ಲದ ಮನುಷ್ಯನಿಲ್ಲ.

–ಗಾದೆ